# ಈ ಪರಿಯ ಸಂಗೀತ ಪ್ರೀತಿ..!

**ಯಾರ ಧನಸಹಾಯಕ್ಕೂ ಕೈಚಾಚದೆ, ಸ್ವಂತ ಖರ್ಚಿನಲ್ಲಿ, ತಮಗೆ ಬಂದ ಅಲ್ಪ ಸಂಬಳದಲ್ಲಿ ಸ್ವಲ್ಪ ಪಾಲನ್ನು ಸಂಗೀತ ಕಾರ್ಯಕ್ರಮ ನಡೆಸುವುದಕ್ಕಾಗಿಯೇ ಮೀಸಲಿಟ್ಟು, ಸಂಗೀತ ಕಲೆಯನ್ನು ನಿರಂತರವಾಗಿ 30 ವರ್ಷಗಳಿಂದ ಪೋಷಿಸಿಕೊಂಡು ಬಂದ ಅಪರೂಪದ ವ್ಯಕ್ತಿ ಪ್ರಾಣೇಶ್ ಬಾಬು.**

★ **ಉಮಾ ವೇಣೂರು**

'ಸಂಗೀತಮಯಂ ಜಗತ್ ಸರ್ವಂ..' ಎಂಬುದನ್ನು ಸ್ವಲ್ಪ ಬದಲಿಸಿ 'ಸಂಗೀತ ಆಯೋಜನಂ ಮನಃ ಖುಷಿಂ..' ಎಂದು ಹೇಳಿದರೆ ಈ ಮಾತಿಗೆ ಅತ್ಯಂತ ಸೂಕ್ತವಾದ ವ್ಯಕ್ತಿಯೊಬ್ಬರು ನಮಗೆ ಸಿಗುತ್ತಾರೆ. ಇವರು ಸಂಗೀತ ಸರಸ್ವತಿಯನ್ನು ಒಲಿಸಿಕೊಳ್ಳದಿದ್ದರೂ ಈ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ ಪ್ರಾಣೇಶ್‌ಬಾಬು.

ಹಾಗೆ ನೋಡಿದರೆ ಶಾಸ್ತ್ರೀಯ ಸಂಗೀತಕ್ಕೆ ಇರುವ ಸೆಳೆತ ಒಂದು ರೀತಿಯದಲ್ಲ; ಅದು ಅನೇಕ ಬಗೆಯದು. ಕೆಲವರು ಸಂಗೀತದ ಮೋಹಕ್ಕೆ ಒಳಗಾಗಿ ಕಲಿಯಲು ಆರಂಭಿಸಿದರೆ, ಇನ್ನು ಕೆಲವರು ಕಲಿಯದೇ ಇದ್ದರೂ ಕಲಾಪೋಷಕರಾಗಿ ನಿಸ್ವಾರ್ಥವಾಗಿ ಸಂಗೀತ ಸೇವೆ ಮಾಡುತ್ತಾರೆ. ಇವರಲ್ಲಿ ಎರಡನೆ ಗುಂಪಿಗೆ ಸೇರುವವರು ಕಲಾ ಪೋಷಕರಾದ ಬೆಂಗಳೂರಿನ ಸಹಕಾರ ನಗರದ ಪ್ರಾಣೇಶ್.

ಶಾಸ್ತ್ರೀಯ ಸಂಗೀತದಲ್ಲಿ ಒಬ್ಬ ಗಾಯಕ/ಗಾಯಕಿಯ ಪ್ರತಿಭೆ, ಸಾಧನೆ ಅನಾವರಣಗೊಳ್ಳಬೇಕಾದರೆ ಕಲಾ ಪೋಷಕರ, ಕಲಾ ಆರಾಧಕರ, ಆಯೋಜಕರ ಪಾತ್ರ ಬಹಳ ಮುಖ್ಯ. ಈ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವವರ ಸಂಖ್ಯೆ ನಮ್ಮಲ್ಲಿ ಬಹಳ ವಿರಳ. ಯಾರ ಧನಸಹಾಯಕ್ಕೂ ಕೈಚಾಚದೆ, ಸ್ವಂತ ಖರ್ಚಿನಲ್ಲಿ, ತಮಗೆ ಬಂದ ಅಲ್ಪ ಸಂಬಳದಲ್ಲಿ ಸ್ವಲ್ಪ ಪಾಲನ್ನು ಸಂಗೀತ ಕಾರ್ಯಕ್ರಮ ನಡೆಸುವುದಕ್ಕಾಗಿಯೇ ಮೀಸಲಿಟ್ಟು, ಸಂಗೀತ ಕಲೆಯನ್ನು ನಿರಂತರವಾಗಿ 30 ವರ್ಷಗಳಿಂದ ಪೋಷಿಸಿಕೊಂಡು ಬಂದ ಅಪರೂಪದ ವ್ಯಕ್ತಿ ಪ್ರಾಣೇಶ್. ಈ ನಿಟ್ಟಿನಲ್ಲಿ ಇವರ 'ಸಂಗೀತ ಪ್ರೀತಿ' ಸ್ತುತ್ಯಾರ್ಹ.

ಬರೀ ಬೆಂಗಳೂರಿನ ಕಲಾವಿದರಿಗಷ್ಟೇ ಅಲ್ಲದೆ ರಾಜ್ಯದ ಎಲ್ಲ ಜಿಲ್ಲೆಗಳ ಉದಯೋನ್ಮುಖ, ಪ್ರತಿಭಾವಂತ ಕಲಾವಿದರಿಗೆ ವೇದಿಕೆ ಒದಗಿಸಿಕೊಡುತ್ತಾರೆ. 'ಏಕವ್ಯಕ್ತಿ'ಯಾಗಿ ಇಡೀ ಕಾರ್ಯಕ್ರಮವನ್ನು ಅದರಲ್ಲೂ 62ರ ಈ ಇಳಿ ವಯಸ್ಸಿನಲ್ಲಿ ಅತ್ಯಂತ ಹುಮ್ಮಸ್ಸಿನಿಂದ ಆಯೋಜಿಸುವುದು ಇವರ ಹೆಚ್ಚುಗಾರಿಕೆ.

'ಶಾಸ್ತ್ರೀಯ ಸಂಗೀತಕ್ಕಾಗಿ ಉತ್ಕೃಷ್ಟ ಸಂಯೋಗ' ಎಂಬ ಮಹತ್ತರ ಧ್ಯೇಯ ಇಟ್ಟುಕೊಂಡು ಬೆಂಗಳೂರಿನ ಸಹಕಾರ ನಗರದಲ್ಲಿ ಸುಮಾರು ಏಳು ವರ್ಷಗಳ ಹಿಂದೆ ಆರಂಭಿಸಿದ 'ರಾಗ ಸಂಗಮ' ಸಂಸ್ಥೆ ಇದೀಗ ನೂರು ಕಾರ್ಯಕ್ರಮಗಳನ್ನು ಆಯೋಜಿಸಿದ ಸಂಭ್ರಮದಲ್ಲಿದೆ. ಸುಮಾರು 26 ವರ್ಷಗಳ ಕಾಲ ಬ್ಯಾಂಕ್ ಉದ್ಯೋಗಿಯಾಗಿದ್ದ ಪ್ರಾಣೇಶ್ ಬಾಬು ಇದಕ್ಕೂ ಮುನ್ನ ದಾವಣಗೆರೆ, ಹರಪನಹಳ್ಳಿ, ಧಾರವಾಡ.. ಹೀಗೆ ರಾಜ್ಯದ ನಾನಾ ಭಾಗಗಳಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸುತ್ತಾ ಬಂದವರು. ಬ್ಯಾಂಕ್‌ನಿಂದ ಸ್ವಯಂ ನಿವೃತ್ತಿ ಪಡೆದ ಈ ಕಲಾ ಪೋಷಕರು ನಾಡಿನ ಹಲವಾರು ಉದಯೋನ್ಮುಖ ಕಲಾವಿದರಿಗೆ ವೇದಿಕೆ ಒದಗಿಸಿದ್ದಾರೆ.

## ಅತೀವ ಆಸಕ್ತಿ

ಪ್ರಾಣೇಶ್ ಬಾಬು ಅವರಿಗೆ ಚಿಕ್ಕಂದಿನಿಂದಲೂ ಸಂಗೀತದಲ್ಲಿ ಅತೀವ ಆಸಕ್ತಿ. ಧಾರವಾಡದ ಪಂ. ವೆಂಕಟೇಶ್ ಕುಮಾರ್ ಅವರ ಬಳಿ ಸ್ವಲ್ಪ ಕಾಲ ಸಂಗೀತ ಕಲಿತರೂ ಕಛೇರಿ ಕೊಡುವಷ್ಟರ ಮಟ್ಟಿಗೆ ಅವರು ತಯಾರಾಗಲಿಲ್ಲ. ಆದರೆ ತಮ್ಮ ಆಸಕ್ತಿಯನ್ನು ಸಂಗೀತ ಕಛೇರಿ ಆಯೋಜನೆ ಮಾಡುತ್ತಾ ಆನಂದ ಪಡುವವರು. ಬೆಂಗಳೂರಿನ ವಿವಿಧೆಡೆ ನಡೆಯುತ್ತಿದ್ದ ಸಂಗೀತ ಕಛೇರಿಗಳಿಗೆಲ್ಲ ಹೋಗಿ ಕೇಳಿ ಆಸ್ವಾದಿಸುತ್ತಿದ್ದ ಅವರಿಗೆ ತಾವೂ ಇಲ್ಲಿ ಒಂದು ಸಂಸ್ಥೆ ಆರಂಭಿಸಿ ಕಛೇರಿ ಆಯೋಜಿಸಿದರೆ ಹೇಗೆ ಎಂಬ ಆಲೋಚನೆ ಹೊಳೆಯಿತಂತೆ. ಸ್ವಂತ ಖರ್ಚಿನಲ್ಲೇ ಸಂಗೀತ ಕಛೇರಿ ಏರ್ಪಾಡು ಮಾಡಿದರು. ಕಲಾವಿದರ ಖರ್ಚು, ವೇದಿಕೆ, ಮೈಕ್, ಲೈಟಿಂಗ್, ಆಹ್ವಾನ ಪತ್ರಿಕೆಗಾಗಿ ಬರುವ ಯಾವುದೇ ಖರ್ಚುಗಳಿಗೆ ಅವರು ಯಾರನ್ನೂ ಕೈಚಾಚಲಿಲ್ಲ. ಸತತ ಪರಿಶ್ರಮದಿಂದ 'ರಾಗ ಸಂಗಮ'ವನ್ನು ಆರಂಭಿಸಿ ನಾಡಿನ ಹಲವಾರು ಕಲಾ ಪ್ರತಿಭೆಗಳಿಗೆ ವೇದಿಕೆ ಒದಗಿಸುತ್ತಾ ಬಂದರು. ಇವರ ಬತ್ತದ ಉತ್ಸಾಹ ಕಂಡ ಅನೇಕ ದಾನಿಗಳು ಇವರಿಗೆ ಈಗೀಗ ಸಹಾಯ ಮಾಡಲು ಮುಂದೆ ಬರುತ್ತಿದ್ದಾರೆ.


ಪ್ರಾಣೇಶ್ ಬಾಬು

ಮೊದಲ ಕಾರ್ಯಕ್ರಮವನ್ನು ಪಂ. ರಾಘವೇಂದ್ರ ಗುಡಿ ಅವರು ಪ್ರಸ್ತುತಪಡಿಸಿದರು. ಅದಾಗಿ ಪಂ. ವಿನಾಯಕ ತೊರವಿ, ಪಂ. ಪರಮೇಶ್ವರ ಹೆಗಡೆ, ಉಸ್ತಾದ್ ಫಯಾಜ್ ಖಾನ್, ಪಂ. ರವೀಂದ್ರ ಕಾಟೋಟಿ, ಪಂ. ವಿಶ್ವನಾಥ್ ನಾಕೋಡ್, ಪಂ. ಉಮಾಕಾಂತ್ ಪುರಾಣಿಕ್, ವಿದುಷಿ ನೀಲಾ ರಾಮಗೋಪಾಲ್, ವಿದುಷಿ ಅನಸೂಯ ಕುಲಕರ್ಣಿ, ವಿದುಷಿ ರೇವತಿ ತಾರಕರಾಮ್ ಮುಂತಾದ ಸಂಗೀತದ ಖ್ಯಾತನಾಮರಲ್ಲದೆ ಅನೇಕ ಉದಯೋನ್ಮುಖ ಪ್ರತಿಭೆಗಳು ಇಲ್ಲಿ ಸಂಗೀತ ಕಛೇರಿ ಪ್ರಸ್ತುತಪಡಿಸಿದ್ದಾರೆ. ಬರೀ ಗಾಯನ ಮಾತ್ರವಲ್ಲದೆ ಸಿತಾರ್, ಗಿಟಾರ್, ಹಾರ್ಮೋನಿಯಂ, ವೀಣೆ, ಕೊಳಲು ಮುಂತಾದ ವಾದ್ಯ ಸಂಗೀತಗಾರರೂ ಇಲ್ಲಿ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಸಂಗೀತ ಕಛೇರಿಗಳ ಜತೆಗೆ ಮಲ್ಹಾರ ಸಂಭ್ರಮ, ಪುರಂದರ ದರ್ಶನ, ಸಂತ ಶಿಶುನಾಳ ಷರೀಫರ ಕುರಿತ ಸಂಗೀತ ಪ್ರಾತ್ಯಕ್ಷಿಕೆ ಕೂಡ ಆಯೋಜಿಸಲಾಗಿತ್ತು. ಯಾವ ಕಾರ್ಯಕ್ರಮ ನಡೆದರೂ ಸಹೃದಯ ಕೇಳುಗರಿಂದ ಸಭಾಂಗಣ ತುಂಬಿರುತ್ತದೆ. ಇದು 'ರಾಗ ಸಂಗಮ'ದ ವೈಶಿಷ್ಟ್ಯ.

'ನಾನು ಸಂಗೀತ ಕೇಳಿ ಖುಷಿ ಪಡ್ತೀನಿ, ಇದನ್ನು ಇನ್ನಷ್ಟು ರಸಿಕರು ಆಸ್ವಾದಿಸಲಿ ಎಂಬುದು ಇದರ ಹಿಂದಿನ ಉದ್ದೇಶ' ಎನ್ನುತ್ತಾರೆ ಪ್ರಾಣೇಶ್ ಬಾಬು.

ಮೂಲತಃ ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿ ಗ್ರಾಮದವರಾದ ಪ್ರಾಣೇಶ್ ಓದಿದ್ದು ಬಿಎಸ್‌ಸಿ ಪದವಿ. ಇವರ ಸಂಗೀತ ಸೇವೆಯನ್ನು ಹರಿದಾಸ ಸಂಘ ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿದೆ. ಸದ್ಯ ಖಾಸಗಿ ಬಸ್‌ಗಳಿಗೆ ಮುಂಗಡ ಟಿಕೆಟ್ ನೀಡುವ ಮತ್ತು ಕೊರಿಯರ್ ಏಜೆನ್ಸಿ ಇಟ್ಟುಕೊಂಡು ಸಣ್ಣ ಪ್ರಮಾಣದ ಉದ್ಯಮ ನಡೆಸುತ್ತಿರುವ ಇಂತಹ ನಿಸ್ವಾರ್ಥ ಸಂಗೀತ ಪೋಷಕರ ಸಂಖ್ಯೆ ಇನ್ನಷ್ಟು ಹೆಚ್ಚಲಿ.




'ರಾಗ ಸಂಗಮ' ಆಯೋಜಿಸಿದ್ದ ಕಾರ್ಯಕ್ರಮವೊಂದರ ಸಂಗ್ರಹ ಚಿತ್ರ